# ರಾಜ ಒಡೆಯರ್

## ೧

ಅಮಾವಾಸ್ಯೆಯ ಕತ್ತಲು ಅರಮನೆಯನ್ನು ಕ್ರಮೇಣವಾಗಿ ಆವರಿಸಿಕೊಳ್ಳತೊಡಗಿತ್ತು. ಮಬ್ಬುಗತ್ತಲಲ್ಲಿ ಎದುರಿನವರಾರೆಂದೂ ಗುರುತಿಸಲಾಗದ ಸ್ಥಿತಿ ಮೂಡಿದಾಗ ರಾಜಮಾತೆ ವೀರಾಜಮ್ಮಣ್ಣಿಯವರು ಅವ್ವೇರರನ್ನು ಮೆಲುಧ್ವನಿಯಲ್ಲಿ ಕರೆದಿದ್ದರು. ಅದಕ್ಕೆ ಪ್ರತಿಯಾಗಿ ಯಾರ ಧ್ವನಿಯೂ ಕೇಳಿ ಬಂದಿರಲಿಲ್ಲ. ಕುಳಿತಿದ್ದ ಆಸನದಿಂದ ಎದ್ದ ರಾಜಮಾತೆ ಕಾಲಬಳಿ ಇರಿಸಿದ್ದ ಕಾಲುಮಣೆಯನ್ನು ಎಡವಿದ್ದರು. ಹೆಬ್ಬೆಟ್ಟಿಗಾದ ನೋವು ಅವರ ಬಾಯಿಂದ ನೋವಿನ ಸ್ವರವನ್ನು ಹೊರಡಿಸಿತ್ತು. ಹಾಗೆಯೇ ಆಸನದಲ್ಲಿ ಮತ್ತೆ ಕುಳಿತಿದ್ದರು.

ಯಾಕೋ ಮಹಾರಾಜರು ಹೋದ ಮೇಲೆ ಇಡೀ ಅರಮನೆಗೆ ಅರಮನೆಯೇ, ಅರಮನೆಯೇನು ?! ಇಡೀ ನಾಡಿಗೆ ನಾಡಿನಲ್ಲೇ ಅರಾಜಕವಾದಂತಹ ಸ್ಥಿತಿ ಮೂಡಿಬಿಟ್ಟಿದೆ. ಅರಮನೆಯ ಆಚೆ ಏನು ನಡೆಯುತ್ತಿದೆಯೆಂಬ ಅರಿವು ಅವರಿಗೇನೂ ಇಲ್ಲ. ಹಿಂದೂ ಇರಲಿಲ್ಲ. ಈಗಲೂ ಇಲ್ಲ. ತಮ್ಮ ರಾಜಕಾರ್ಯದ ನಡುವೆ ಬಿಡುವಾದಾಗ ಮಹಾರಾಜರು ಅತ್ತ ಆಗಮಿಸಿದರೆ ನಾಕಾರು ಮಾತುಗಳಲ್ಲಿ ಹೊರಗಿನ ವಿಚಾರಗಳು ತಿಳಿದು ಬರುತ್ತಿದ್ದವಷ್ಟೆ. ಅವೆಲ್ಲ ಹೇಳಿಕೇಳಿ ರಾಜಕಾರಣಕ್ಕೆ ಸಂಬಂಧಿಸಿದ ವಿಚಾರಗಳು. ಕೇಳುವಾಗ, 'ಹ್ಞೂ' ಗುಡುತ್ತಿದ್ದರು. ಕೆಲವೊಮ್ಮೆ ಮಹಾರಾಜರ ಬಗೆಗೆ ಹೆಮ್ಮೆ, ಅಭಿಮಾನಗಳನ್ನು ತಾಳುತ್ತಿದ್ದರು.

ಆದರೀಗ ಮಹಾರಾಜರು ಕಾಲನ ಕರೆ ಕೇಳಿ ಚಾಮುಂಡೇಶ್ವರಿಯ ಪಾದ ಸೇರಿದ್ದಾರೆ. ಹಿರಿಯ ಮಗ ಬೆಟ್ಟದ ಚಾಮರಾಜ ಒಡೆಯರಿಗೆ ಪಟ್ಟ ಕಟ್ಟಲಾಗಿದೆ. ಅಲ್ಲಿಂದಲೇ ಆರಂಭವಾಯಿತೆ ಇಂತಹ ಡೋಲಾಯಮಾನ ಪರಿಸ್ಥಿತಿ. ಬೆಟ್ಟದ ಚಾಮರಾಜರು ಪಟ್ಟಕ್ಕೆ ಬಂದಾಗಿನಿಂದಲೇ ಈ ಪರಿಸ್ಥಿತಿ ಏರ್ಪಟ್ಟಿತ್ತು. ಏನೇನೋ ಓದಿಕೊಂಡಿದ್ದಾನೆ ! ಯಾವ ವಿಷಯವೇ ಆಗಲಿ ಅದನ್ನವ ರಾಜನಂತೆ ನೋಡ ಹೋಗುವುದಿಲ್ಲ. ಸಾವಧಾನವಾಗಿ, ಧಾರ್ಮಿಕನಂತೆ ಮಾತನಾಡುತ್ತಾನೆ. ಹಾಗೆ ನೋಡಿದರೆ ಪಟ್ಟಾಭಿಷೇಕಕ್ಕೆ ಅವನನ್ನು ಒಪ್ಪಿಸಬೇಕಾದರೇ ಸಾಕು ಬೇಕಾಗಿತ್ತು. ಅವನಿಗ್ಯಾಕೋ ರಾಜನಾಗುವುದರಲ್ಲಿ ಆಸಕ್ತಿಯೇ ಇದ್ದಂತೆ ಇರಲಿಲ್ಲ. ಏನೂ

ಅರಿಯದ ರಾಜಮಾತೆಯೇ, ಮಗನನ್ನು ಕುಳ್ಳಿರಿಸಿಕೊಂಡು ಒಂದಷ್ಟು ಮಾತನಾಡಿದ್ದರು.

"ಹಾಗೆಲ್ಲ ಒಲ್ಲೆ ಅನ್ನಬಾರದು ಚಾಮರಾಜ. ವಂಶಪಾರಂಪರ್ಯವಾಗಿ ನಡೆದುಕೊಂಡು ಬಂದಿರುವಂಥದ್ದು. ಈ ನಾಡಿನ ವಾರಸುದಾರ ನೀನು. ಹಿರಿಯ ಮಗನೆ ರಾಜ್ಯವನ್ನಾಳುವುದು ಎಲ್ಲ ಕಾಲಕ್ಕೂ ಎಲ್ಲರಲ್ಲೂ ಒಪ್ಪಿತವಾಗಿರುವ ವಿಚಾರ. ನೀನೊಬ್ಬ ಅದನ್ನು ಒಲ್ಲೆ ಎನ್ನುವುದು ಎಷ್ಟರಮಟ್ಟಿಗೆ ಸರಿ."

"ಇಲ್ಲ ಅವ್ವ. ರಾಜತ್ವ, ಈ ಅರಮನೆ, ದಿನಬೆಳಗಾದರೆ ಕತ್ತಿ ಹಿಡಿದು ಹೋರಾಟ ಮಾಡಬೇಕಾದ ಕರ್ತವ್ಯ... ಇದ್ಯಾವುದೂ ನನಗೆ ಇಷ್ಟವಾಗುತ್ತಿಲ್ಲ. ನನ್ನನ್ನು ನನ್ನ ಪಾಡಿಗೆ ಬಿಟ್ಟುಬಿಟ್ಟರೆ ಅದಷ್ಟೇ ಸಾಕು. ಹಕ್ಕಿಯಂತೆ ಅರಮನೆಯಿಂದ ಬೆಟ್ಟದೆಡೆಗೆ ಹಾರಿ ಹೋಗಿಬಿಡುತ್ತೇನೆ. ಹಕ್ಕಿಗೆ ಮಹಾರಾಜತನದ ಪಂಜರದ ಬಾಗಿಲು ತೆರೆದು 'ಒಳಗೆ ಹೋಗು' ಎಂದು ನೂಕುತ್ತಿದ್ದೀರಿ. ಪಂಜರ ಸ್ವರ್ಣದಾದ್ದರೂ ಪಂಜರವೇ. ಅದರ ಗುಣ ಹಕ್ಕಿಯನ್ನು ಹಾರದಂತೆ ಹಿಡಿದಿಡುವಂಥದ್ದೆ. ನನ್ನನ್ನು ನನ್ನ ಪಾಡಿಗೆ ಬಿಟ್ಟುಬಿಡಿರಿ ಅವ್ವ. ರಾಜತ್ವದ ಬಂಧನಕ್ಕೆ ತಳ್ಳದಿರಿ ನನ್ನನ್ನ".

ಮಗ ಸುತ್ತಿ ಬಳಸಿ, ಎಷ್ಟೆಲ್ಲ ಮಾತುಗಳ ನಂತರವೂ ಬಂದು ನಿಲ್ಲುತ್ತಿದ್ದದ್ದು ತನಗೆ ಪಟ್ಟಾಭಿಷೇಕ ಬೇಡ ಎಂಬ ವಿಷಯಕ್ಕೆ. ಮಗ ಯಾಕೆ ಹೀಗಾಡುತ್ತಿದ್ದಾನೆಂಬುದು ತಾಯಿಗೆ ಬಗೆಹರಿಯಲಾರದ ಸಮಸ್ಯೆಯಾಗಿತ್ತು. ಹಾಗೆ ನೋಡಿದರೆ ಅವನ ನಿರಾಕರಣೆಗೆ ಕಾರಣವಾಗುವಂತಹ ಯಾವ ಗುಣಗಳೂ ಅವನಲ್ಲಿ ಕಾಣುತ್ತಿರಲಿಲ್ಲ. ಮಗ ವೀರ, ಶೂರ, ಉತ್ಸಾಹಿ, ಬುದ್ಧಿವಂತನೆಂದುಕೊಳ್ಳುವ ಗುಣಗಳೇ ಅವನಲ್ಲಿ ಎದ್ದು ಕಾಣುತ್ತಿದ್ದವು. ಹತ್ತಾರು ಸಂದರ್ಭಗಳಲ್ಲಿ ಅದನ್ನು ಗುರುತಿಸಿಯೂ ಇದ್ದರು. ಆದರೆ ಅವೆಲ್ಲಕ್ಕೂ ವಿರುದ್ಧವಾದ ಪಟ್ಟದ ನಿರಾಕರಣೆ, ತಾಯಿಯವರಿಗಷ್ಟೇ ಅಲ್ಲ, ಎಲ್ಲರಿಗೂ ಬಿಡಿಸಲಾರದ ಒಗಟೇ ಆಗಿತ್ತು.

ನಾಡಿನ ಉತ್ತರಾಧಿಕಾರತ್ವದ ಪ್ರಶ್ನೆ ಕೇವಲ ರಾಜಕುಟುಂಬಕ್ಕಷ್ಟೇ ಸೀಮಿತವಾದ ವಿಷಯವಲ್ಲ. ನಾಡಿನ ಹಿರಿಯರುಗಳೆಲ್ಲರ ಸಮಕ್ಷಮದಲ್ಲಿ ಸಾಕಷ್ಟು ಚರ್ಚೆಗಳಾದವು. "ಕಾಳಿಕೆಯಿಲ್ಲದ ಚಿನ್ನದಂತೆ ಇದ್ದೀರಿ. ಯಾವುದರಲ್ಲಿಯೂ ನಿಮ್ಮನ್ನು ಬೆರಳು ಮಾಡಿ ತೋರಿಸುವಂತಿಲ್ಲ. ನಾಡಿನ ಪ್ರಭುಗಳಾಗುವ ಎಲ್ಲ ಗುಣಗಳೂ ನಿಮ್ಮಲ್ಲಿವೆ. ಜೊತೆಗೆ ಧರ್ಮ ಪ್ರಕಾರ ನಾಡಿನ ಉತ್ತರಾಧಿಕಾರ ನಿಮ್ಮದೇ ಹೌದು. ರಾಜ್ಯಾಧಿಕಾರಕ್ಕಾಗಿ, ಮಹಾಭಾರತದ ಆದಿಯಿಂದ ಹಿಡಿದು ಈತನಕವೂ ರಕ್ತಪಾತವಾಗುತ್ತಲೇ ಬಂದಿದೆ. ಯಾವ ದೇಶ, ಕಾಲಗಳೂ ಇದಕ್ಕೆ ಅಪವಾದವಾಗಿಲ್ಲ. ಅಂತಹ ಇತಿಹಾಸದ ನಡುವೆ

ನೀವೊಬ್ಬರೆ ರಾಜ್ಯಾಧಿಕಾರ ಬೇಡವೆನ್ನುತ್ತಿರುವುದು. ಖಂಡಿತವಾಗಿಯೂ ನಿಮ್ಮ ವ್ಯಕ್ತಿತ್ವ ಮನಸುಗಳು ಹಿರಿದಾದುವು ರಾಜಕುಮಾರ. ಅಂತಹ ವ್ಯಕ್ತಿತ್ವ, ಮನಸು ಅಷ್ಟರಲ್ಲಿಯೇ ವಿರಮಿಸಿಬಿಡಬಾರದು. ಅದನ್ನು ನಾಡಿಗಾಗಿ, ನಾಡಜನತೆಗಾಗಿ, ಅವರ ಉದ್ಧಾರಕ್ಕಾಗಿ ತೊಡಗಿಸಿ ರಾಜತ್ವವನ್ನು ಒಪ್ಪಿಕೊಳ್ಳುವುದೇ ಎಲ್ಲ ರೀತಿಯಿಂದಲೂ ಧರ್ಮಸಮ್ಮತವಾದುದು. ಪ್ರಜೆಗಳ ಇಚ್ಛೆಯೂ ಅದೇ ಆಗಿದೆ. ಯದುವಂಶದಲ್ಲಿ ಪಾರಂಪರ್ಯವಾಗಿ ನಡೆದು ಬಂದಿರುವ ರಾಜಧರ್ಮವೊಂದನ್ನು ವೈಯಕ್ತಿಕ ಇಷ್ಟಾನಿಷ್ಟಗಳನ್ನು ಮುಂದಿಟ್ಟು ನಿರಾಕರಿಸಬೇಡಿ. ಒಪ್ಪಿಕೊಳ್ಳಿರಿ. ಅದು ನಿಮಗೆ, ಈ ನಾಡಿಗೆ, ನಾಡಜನತೆಗೆ ಎಲ್ಲರಿಗೂ ಮಂಗಳವನ್ನುಂಟು ಮಾಡುತ್ತದೆ".

ತಾಯಿಯ ಬಳಿ ಬಂಧಿಯಾಗಲು ಇಚ್ಛೆಯಿಲ್ಲ ಎಂದು ಹಾಡಿದ್ದ, ಹಾರಾಡಿದ್ದ ಹಕ್ಕಿಗೆ, ಹಿರಿಯರ ಒತ್ತಾಯದ ಮಾತುಗಳನ್ನು ಮೀರಲಾಗಿರಲಿಲ್ಲ. ಹಿರಿಯರು ರಾಜಕುಮಾರನನ್ನು ರಾಜಧರ್ಮದಲ್ಲಿ, ಧರ್ಮಸಮ್ಮತವಾಗಿಯೇ ಬಂಧಿಸಿದ್ದರು. ರಾಜಕುಮಾರ ಬೆಟ್ಟದ ಚಾಮರಾಜಒಡೆಯರು ಮಹಾರಾಜರಾಗಿ ನಾಡಿನ ಸಕಲ ಹೊಣೆಗಳನ್ನೂ ಹೊತ್ತಿದ್ದರು.

ಆದರೆ ಅದು 'ಹೊತ್ತಿದ್ದಲ್ಲ', 'ಹೊರಿಸಿದ್ದು' ಎಂಬ ಭಾವನೆ ಅರಮನೆಯಲ್ಲಿ, ನಾಡಿನಲ್ಲಿ ಮೂಡಲು ಬಹಳ ದಿನಗಳೇನೂ ಬೇಕಿರಲಿಲ್ಲ. ಪಟ್ಟಾಭಿಷೇಕಕ್ಕೆ ಮುನ್ನ ಹೇಗಿದ್ದರೊ ಅದೇ ಮನಸ್ಥಿತಿ ಚಾಮರಾಜ ಮಹಾರಾಜರನ್ನು ಆಕ್ರಮಿಸಿಕೊಂಡಿತ್ತು. ಮಹಾರಾಜನಾದೆ, ಒಂದು ನಾಡಿನ ಜವಾಬ್ದಾರಿ ತನ್ನ ಮೇಲಿದೆ. ಅದಕ್ಕಾಗಿಯಾದರೂ ತಾನು ಒಂದಷ್ಟು ಬದಲಾಗಬೇಕು ಎಂಬುದನ್ನವರು ಆಲೋಚಿಸಲು ಹೋಗಲೇ ಇಲ್ಲ. ಅವರ ಓದು, ಧಾರ್ಮಿಕತೆಗಳ ನಡುವೆ ಅದೊಂದು ಬಗೆಯ ವೈರಾಗ್ಯವೂ ಬಂದು ಅಮರಿಕೊಂಡಿತ್ತು. ದಿನಬೆಳಗಾದರೆ ಎದುರಾಗುವ ನಾಡ ಜನರ ಚಿತ್ರವಿಚಿತ್ರ ಸಮಸ್ಯೆಗಳು, ಆಡಳಿತದ ಗೋಜಲುಗಳು, ವಿಭಿನ್ನ ಮನಸ್ಥಿತಿಗಳ ನೂರಾರು ಜನರ ರೀತಿನೀತಿಗಳು, ಮಹಾರಾಜರಲ್ಲಿ ಲೌಕಿಕದ ಅರಿವು ಮೂಡಿಸುವುದಕ್ಕೆ ಬದಲಾಗಿ ಆ ಬಗೆಗೆ ವಿಮುಖವಾಗುವ ಪರಿಯನ್ನು ಹೆಚ್ಚಿಸತೊಡಗಿತ್ತು.

ಮಹಾರಾಜ, ದೊರೆತನ ಮರೆತರೆ, ದೊರೆಯಾಗಬಯಸುವ ಬಯಕೆ ಒಬ್ಬ ಸಾಮಾನ್ಯ ಕಾಲಾಳಿನಲ್ಲಿಯೂ ಮೂಡಿಬಿಡುತ್ತದೆ. ಅದು ಅವನ ತಪ್ಪಲ್ಲ. ಆ ರಾಜತ್ವವೇ ಆ ರೀತಿಯದು. ತಿರುಕನನ್ನು ಮಹಾರಾಜನನ್ನಾಗಿಸುತ್ತದೆ, ಮಹಾರಾಜನನ್ನು ತಿರುಕನನ್ನಾಗಿಸಿಬಿಡುತ್ತದೆ. ಮಹಾರಾಜರಾಗಿ ಚಾಮರಾಜರು ತೋರಿಸಿದ ನಿಷ್ಕ್ರಿಯತೆ ಅರಮನೆಯ ಓರ್ವ ಸಾಮಾನ್ಯ ಅವ್ವೇರರೂ ಅವರ ಕರ್ತವ್ಯವನ್ನು ಸರಿಯಾಗಿ

ನಿರ್ವಹಿಸುವಲ್ಲಿ ಸೋಲುವಂತೆ ಮಾಡಿಬಿಟ್ಟಿತ್ತು. ಅರಾಜಕತೆ ಅರಮನೆಯಲ್ಲಿಯೇ ಮೊದಲು ಆರಂಭವಾಗಿತ್ತು. ಯಾವಯಾವ ಕಾಲಕ್ಕೆ, ಯಾವಯಾವ ಕೆಲಸಗಳು ತಮಗೆ ವಹಿಸಲ್ಪಟ್ಟಿವೆ ಎಂಬುದನ್ನೇ ಅರಮನೆಯ ದಾಸದಾಸಿಯರು ಮರೆತುಬಿಟ್ಟಿದರು. ಕತ್ತಲಾದುದೂ ಅವರ ಪರಿವಿಗಿಲ್ಲ. ಯಾರಾದರೂ ಗದರಿಸದಿದ್ದರೆ ಬೆಳಗಾಗುವುದರ ಪರಿವೂ ತಮಗಿಲ್ಲ ಎನ್ನುವ ಸ್ಥಿತಿಯನ್ನವರು ತಲುಪಿಬಿಟ್ಟಿದ್ದರು.

ಅರಮನೆಯ ಒಳಗೆ ಏನೆಲ್ಲ ನಡೆಯುತ್ತಿರುವುದರ ಅರಿವು ರಾಜಮಾತೆ ವೀರಾಜಮ್ಮಣ್ಣಿಯವರಿಗೆ ಬಹಳ ಚೆನ್ನಾಗಿಯೇ ಅರ್ಥವಾಗಿತ್ತು. ಎಷ್ಟೋ ಬಾರಿ ಅವರೇ ಮಗನ ಕೋಣೆಯತ್ತ ಚಿತ್ತೈಸುತ್ತಿದ್ದರು. ಹಲವು ಬಾರಿ ಮಗ ಸಿಗುತ್ತಲೇ ಇರಲಿಲ್ಲ. ಒಡೆಯರು, ಚಾಮುಂಡೇಶ್ವರಿಯ ಸನ್ನಿಧಾನಕ್ಕೆ ಹೋಗಿದ್ದಾರೆಂಬ ಉತ್ತರವೇ ಸಿಗುತ್ತಿದ್ದದ್ದು. ಇನ್ನು ಕೆಲವು ಬಾರಿ ಸಿಕ್ಕರೆ ನಿದ್ದೆಗೆ ಜಾರಿ ಹೋದ ಸ್ಥಿತಿಯಲ್ಲಿರುತ್ತಿದ್ದರು. ಸೊಸೆಯರು ; "ಯಾವುದೋ ಗ್ರಂಥವನ್ನು ಓದುತ್ತಿದ್ದರು. ಇದೇ ತಾನೇ ನಿದ್ದೆಗಿಳಿದರು" ಎಂದು ಹೇಳುತ್ತಿದ್ದರು. ಆ ಮಾತುಗಳು ಸುಳ್ಳಾಗಿರುತ್ತಿರಲಿಲ್ಲ. ಓದುತ್ತಿದ್ದ ತಾಳೆಗರಿಗಳ ಕಟ್ಟುಗಳು ಹಾಸಿಗೆಯ ಪಕ್ಕದಲ್ಲಿಯೇ ಇರುತ್ತಿದ್ದವು. ಕೆಲವೊಮ್ಮೆ ಅವು ಎದೆಯ ಮೇಲೆ ಇದ್ದಂತೆಯೇ ನಿದ್ದೆ ಹೋದ ನೋಟಗಳೂ ರಾಜಮಾತೆಯವರಿಗೆ ಸಿಕ್ಕಿತ್ತು. ಮಗನ ಅಧ್ಯಯನ ತಾಯಿಗೆ ಖುಷಿ ಕೊಡುತ್ತಿದ್ದ ಮರುಕ್ಷಣದಲ್ಲಿಯೇ ಮಹಾರಾಜರ ಈ ಬಗೆಯ ನಾಡನ್ನು ಮರೆತಂತಹ ಓದು ರಾಜಮಾತೆಯವರಲ್ಲಿ ಬೇಸರ ಮತ್ತು ಆತಂಕಗಳನ್ನು ಮೂಡಿಸಿಬಿಡುತ್ತಿದ್ದವು.

ಎಂದೋ ಒಮ್ಮೆ ಮಹಾರಾಜರು ಸಿಕ್ಕಿದರೆ ರಾಜಮಾತೆ ಬಹಳ ಮೃದುವಾಗಿಯೇ ಮೆಲುಧ್ವನಿಯಲ್ಲಿ ತಮ್ಮ ಆತಂಕವನ್ನು ತೋಡಿಕೊಂಡು, ಸೂಕ್ಷ್ಮವಾಗಿ ತಿಳಿ ಹೇಳುತ್ತಿದ್ದರು. "ಈಗ ಏನಾಗುತ್ತಿದೆ ಅವ್ವ, ನಾಡಿನಲ್ಲಿ ಎಲ್ಲವೂ ಚೆನ್ನಾಗಿಯೇ ನಡೆದುಕೊಂಡು ಹೋಗುತ್ತಿದೆಯಲ್ಲ. ಆಡಳಿತದಲ್ಲಿಯೂ ಅಂತಹ ಸಮಸ್ಯೆಗಳೇನು ತಲೆದೋರಿಲ್ಲ. ಎಲ್ಲ ಹಂತದ ಅಧಿಕಾರಿಗಳೂ ಅವರವರ ಕೆಲಸವನ್ನು ಚೆನ್ನಾಗಿಯೇ ನಿಭಾಯಿಸುತ್ತಿದ್ದಾರೆ. ನೀವು ಆತಂಕ ಪಟ್ಟುಕೊಳ್ಳುವಂಥದ್ದೇನೂ ಆಗಿಲ್ಲ. ವಿನಾಕಾರಣ ನೀವು ಅದಕ್ಕೆ ಒಳಗಾಗುತ್ತಿದ್ದೀರಿ" ಒಂದೆರಡು ಪದಗಳ ವ್ಯತ್ಯಾಸ ಬಿಟ್ಟರೆ ಮಹಾರಾಜರಿಂದ ಬರುತ್ತಿದ್ದದು ಯಾವಾಗಲೂ ಒಂದೇ ಉತ್ತರ. 'ರಾಜತ್ವ' ಎಂದರೆ ಇದಷ್ಟೇ ಅಲ್ಲ. ಇನ್ನೂ ಏನೇನೋ ಇರುತ್ತದೆ. ರಾಜಮಾತೆಗೆ ವಿವರಿಸಬೇಕೆನ್ನಿಸುತ್ತಿತ್ತು. ಆದರೆ ಬಾಯಿಯಲ್ಲಿ ಮಾತುಗಳು ಹೊರಡುತ್ತಿರಲಿಲ್ಲ. ತಟಕ್ಕನೆ - ಮಗನನ್ನು, ಬಲವಂತವಾಗಿ ಪಟ್ಟಾಭಿಷೇಕಕ್ಕೆ ಒಪ್ಪಿಸಿದ್ದ ಸನ್ನಿವೇಶ ಬೇಡಬೇಡವೆಂದರೂ ಎದುರಾಗಿ ಅವರ ಬಾಯನ್ನು ಕಟ್ಟಿ ಹಾಕಿಬಿಡುತ್ತಿತ್ತು.

ಆಡಲಾಗದ, ಅನುಭವಿಸಲಾಗದ ಆತಂಕ ಮತ್ತು ನೋವುಗಳ ಮೇಲೆ ಬರೆ ಎಳೆದಂತೆ ಅರಮನೆ ಊಳಿಗದವರ ನಡೆನುಡಿಗಳು ಕೊಂಚ ಕೊಂಚವೇ ಬದಲಾಗುತ್ತಿತ್ತು. ಎಲ್ಲರೂ ತಮಗೆ ತಾವೇ ಒಡೆಯರು ಎಂಬಂತಹ ಸ್ಥಿತಿಯಲ್ಲಿ ಮೆರೆದಾಡುತ್ತಿರುವಂತೆ ಕಂಡು ಬರುತ್ತಿತ್ತು. ಕತ್ತಲಾದರೂ ದೀಪಗಳನ್ನು ಹಚ್ಚಬೇಕೆಂಬ ಪರಿವೂ ಇಲ್ಲವೆಂಬ ರೀತಿಯಲ್ಲಿ ಅವರ ಬೇಜವಾಬ್ದಾರಿ ಬೆಳೆಯತೊಡಗಿತ್ತು. ಊಳಿಗದವರಲ್ಲಿಯೇ ಜವಾಬ್ದಾರಿ ಇರುವವರಾರಾದರೂ ಬುದ್ಧಿ ಹೇಳಲು ಬಂದರೆ ; "ಯಥಾ ರಾಜ ತಥಾ ಪ್ರಜಾ" ಮುಗುಮ್ಮಾಗಿ ನುಡಿದು ನಕ್ಕುಬಿಡುತ್ತಿದ್ದರು. "ಜವಾಬ್ದಾರಿ ಎಲ್ಲಿಂದ ಆರಂಭವಾಗಬೇಕೋ ಅಲ್ಲಿ ಆರಂಭವಾಗ್ಲಿ. ಆಮೇಲೆ ನಮ್ ಜವಾಬ್ದಾರಿ ಬಗೆ ನೆನಪಿಸೋಕೆ ಬರ್ರಿ".

ಇಂತಹ ಮಾತುಗಳು ಆಗೀಗ ರಾಜಮಾತೆಯವರ ಕಿವಿಗೂ ಬಿದ್ದಿದ್ದವು. ಮನೆಯ ಚಿನ್ನವೇ ಸರಿಯಿಲ್ಲದ ಮೇಲೆ ಆಚಾರಿಯನ್ನು ಬೈಯ್ದೇನೂ ಪ್ರಯೋಜನವಿಲ್ಲವೆಂಬಂಥ ಸ್ಥಿತಿಯಾಗಿತ್ತು ಅವರದು. ಅಮಾವಾಸ್ಯೆಯ ಕತ್ತಲದು. ಆದರೆ ಯಾವ ಊಳಿಗಕ್ಕೂ ದೀಪಗಳನ್ನು ಹೊತ್ತಿಸಬೇಕೆಂಬ ಜವಾಬ್ದಾರಿ ಮೂಡಿರಲಿಲ್ಲ. ನೀರವ ಮೌನ ರಾಜಮಾತೆಯವರನ್ನು ಕಿತ್ತು ತಿನ್ನತೊಡಗಿತ್ತು.

ಆ ಮೌನವನ್ನು ಭೇದಿಸುವಂತೆ ಊಳಿಗದವರು ಮಹಾರಾಜರು ಆಗಮಿಸುತ್ತಿರುವ ಸೂಚನೆಯನ್ನು ದೊಡ್ಡ ಧ್ವನಿಯಲ್ಲಿ ನೀಡತೊಡಗಿದ್ದರು. ಎಲ್ಲೆಲ್ಲಿದ್ದರೋ ಕತ್ತಲೆಯಲ್ಲಿ ಊಳಿಗದವರ ಸರಬರ ಓಡಾಟ ಹಬ್ಬಿಕೊಂಡಿತ್ತು. ಮಹಾರಾಜರು ರಾಜಮಾತೆಯವರ ಕೋಣೆ ಪ್ರವೇಶಿಸಿದಾಗಲೂ ಆ ಕೋಣೆಯಿನ್ನೂ ಬೆಳಕು ಕಂಡಿರಲಿಲ್ಲ.

"ಕತ್ತಲಲ್ಲಿ ಏಕೆ ಕುಳಿತ್ತಿದ್ದೀರಿ ಅವ್ವ. ದೀಪಗಳನ್ನು ಬೆಳಗಲು ಹೇಳಬಾರದಿತ್ತೆ ಊಳಿಗದವರಿಗೆ" ಚಾಮರಾಜರು ಸರಳವಾಗಿ ನುಡಿದಿದ್ದರು. "ಹೇಳಿ ಮಾಡಿಸುವ ಸ್ಥಾನವಲ್ಲ ನಮ್ಮದು ಕುಮಾರ. "ಯಾರಲ್ಲಿ ?" ಎಂದರೆ 'ಏನಪ್ಪಣೆ' ಎಂಬ ನುಡಿಗಟ್ಟಿನಲ್ಲಿ ಮುಳುಗೇಳುವ ರಾಜಮನೆತದವರು ನಾವು. ಮಹಾರಾಜರು ದರ್ಪಿಷ್ಟರಾಗಿಲ್ಲದ್ದಕ್ಕೆ ಅರಮನೆಯ ಮರದ ತೊಲೆಗಳೂ ಮಾತಾಡಿಕೊಳ್ಳುವಂಥಾಗಿದೆ. ಇನ್ನು ಜೀವ ಇರುವ ಊಳಿಗದವರು ಜವಾಬ್ದಾರಿಯಿಂದ ನಡೆದುಕೊಳ್ಳುತ್ತಾರೆಯೆ ? ಅಡುಗೆ ಮನೆಯಲ್ಲಾಡುವ ಸಟ್ಟುಗವೂ ನಾಲ್ಕು ಮಾತನಾಡಿಬಿಡುತ್ತಿದೆ." ರಾಜಮಾತೆಯವರ ದುಃಖ ಅವರ ಪ್ರತಿ ಪದಗಳಲ್ಲಿಯೂ ತುಂಬಿತುಳುಕುತ್ತಿದ್ದ ಅರಿವು ಮಹಾರಾಜರನ್ನೂ ತಟ್ಟಿತ್ತು. ಅಂತಹ ಸಂದರ್ಭದಲ್ಲಿ ಮೂಡಿದ್ದ ಗಂಭೀರತೆಯನ್ನು ತಿಳಿಮಾಡಲೆಂಬಂತೆ ನಿರ್ವಿಕಾರವಾಗಿ ನಕ್ಕು ಅವರು ಅವ್ವೆಯ ಪಕ್ಕದ ಆಸನದಲ್ಲಿ ಕುಳಿತಿದ್ದರು. ಅಲ್ಲಿಯೇ ನಿಂತಿದ್ದ ಊಳಿಗದವರ ಮುಖ ವಿವರ್ಣವಾಗಿತ್ತು. ಹಚ್ಚಿಟ್ಟ ದೀಪಗಳ ಬೆಳಕಿನಲ್ಲಿ ಗೋಡೆಗಳ ಮೇಲೆ ಏರ್ಪಟ್ಟ,

ಕೋಣೆಯಲ್ಲಿ ಕುಳಿತವರ, ನಿಂತವರ ನೆರಳಿನ ಆಕಾರಗಳು ಅಕರಾಳವಿಕರಾಳವಾಗಿ ಕಾಣತೊಡಗಿ ಅಸಾಧ್ಯ ಭಯ ಆವರಿಸಿಕೊಳ್ಳುವ ಸ್ಥಿತಿ ಏರ್ಪಟ್ಟಿತ್ತು. ಆದರೆ ಅವರು ಹೆದರಿಕೊಂಡಂತೆ ಏನೂ ನಡೆದಿರಲಿಲ್ಲ. "ತಿಳಿವಳಿಕೆಯಿಲ್ಲದ ಮಂದಿ, ಎದೆಯ ದೀಪವನ್ನು ಬೆಳಗಿಕೊಳ್ಳುವ ಪರಿ ಅರಿತಿಲ್ಲ. ಏನು ಮಾಡುವುದು ಅವ್ವ. ಒಳಗಿನ ದೀಪವನ್ನೇ ಹಚ್ಚಿಟ್ಟುಕೊಳ್ಳದ ಮಂದಿ ಹೊರಗಿನ ದೀಪವನ್ನು ಹಚ್ಚಿದರೂ ಒಂದೇ, ಹಚ್ಚದಿದ್ದರೂ ಒಂದೇ. ಅವರ ಬಗ್ಗೆ ಮಾತನಾಡಿ ಪ್ರಯೋಜನವಿಲ್ಲ ಬಿಡಿರಿ". ಮಹಾರಾಜರು ಅತ್ಯಂತ ಶಾಂತಧ್ವನಿ ಹೊರಡಿಸಿದ್ದರಷ್ಟೆ.

ವೀರಾಜಮ್ಮಣ್ಣಿಯವರು ಕಣ್ಣಸನ್ನೆಯಿಂದ ಕೋಣೆಯಲ್ಲಿದ್ದ ಊಳಿಗದವರನ್ನು ಹೊರಗೆ ಕಳುಹಿಸಿದ್ದರು. "ಅವ್ವನಾಗಿ ನಿನ್ನ ಈ ಮಾತುಗಳು, ನಿನ್ನ ನಡೆ-ನುಡಿ ಯಾವುವೂ ನನಗೆ ತಪ್ಪು ಅನ್ನಿಸುತ್ತಿಲ್ಲ ಚಾಮರಾಜ. ಬದಲಾಗಿ ನನ್ನ ಮಗ ಎಷ್ಟೆಲ್ಲಾ ತಿಳಿದುಕೊಂಡಿದ್ದಾನೆಂದು ಅಭಿಮಾನವೆನ್ನಿಸುತ್ತದೆ. ಕಂದಾ ನೀನು ನನ್ನ ಮಗನಷ್ಟೇ ಅಲ್ಲ. ಈ ನಾಡನ್ನಾಳುತ್ತಿರುವ ಪ್ರಭು. ಎಲ್ಲರನ್ನೂ ಪೊರೆಯುವ ಮಹಾರಾಜ. ಧರ್ಮದೊಂದಿಗೆ ರಾಜಧರ್ಮವೂ ಬೇಕು. ನಿನ್ನ ಮಾತುಗಳಿಗೆ ಬೆಲೆ ಬರಬೇಕಾದರೆ ನೀನು ಕ್ರಿಯಾಶೀಲನಾಗಬೇಕು ಚಾಮರಾಜ. ತತ್ತ್ವದೊಂದಿಗೆ ಕ್ರಿಯೆಯೂ ಇರಬೇಕು. ತತ್ತ್ವವೊಂದೇ ಬದುಕಾಗದು. ನಿನ್ನ ತಂದೆಯವರೂ ಧರ್ಮಶ್ರದ್ಧೆಯುಳ್ಳವರೇ, ಧಾರ್ಮಿಕ ಮನೋಧರ್ಮದವರೇ ಆಗಿದ್ದರು. ಅಮ್ಮನವರ ಕೃಪೆಯಾದ ಅನಂತರವಂತೂ ಅವರು ಸಂಪೂರ್ಣವಾಗಿ ಮಾತೆಗೆ ಶರಣಾಗಿಬಿಟ್ಟರು. ಆದರೂ ರಾಜತ್ವವನ್ನು ಮರೆತಿರಲಿಲ್ಲ. ಅದನ್ನು ಸಮರ್ಥವಾಗಿಯೇ ನಿಭಾಯಿಸಿದರು. ಶತ್ರುಗಳನ್ನು ಬಗ್ಗುಬಡಿದು ಅವರ ಬಿರುದುಗಳನ್ನು ಧರಿಸಿಕೊಂಡರು. ಅಂಥವರ ಪುತ್ರ ನೀನು, ಕರ್ತವ್ಯವನ್ನು ಮರೆತು ಬೇಜವಾಬ್ದಾರಿಯಿಂದ ವರ್ತಿಸಬಾರದು. ನಾಡಿನಲ್ಲಿರುವ ಅರಾಜಕತೆ ಇರಲಿ, ಅರಮನೆಯೊಳಗೇ ಎಂತಹ ಅರಾಜಕತೆ ವ್ಯಾಪಿಸಿಕೊಂಡಿದೆ ಎಂಬುದನ್ನು ಅರ್ಥ ಮಾಡಿಕೋ. ಇಲ್ಲದಿದ್ದರೆ ನಾಡಿಗೇ ಕಷ್ಟ ಒದಗಿ ಬಂದುಬಿಡುತ್ತದೆ. ನಾಡನ್ನು, ನಾಡಿನ ಜನರನ್ನು ಸಲಹಬೇಕಾದವರೇ ಅದರ ಕಷ್ಟಕ್ಕೆ ಕಾರಣವಾಗುವುದಕ್ಕಿಂತ ಪಾಪದ ಕೆಲಸ ಬೇರೆ ಯಾವುದೂ ಇಲ್ಲ ಮಗನೇ." ರಾಜಮಾತೆ ಹಚ್ಚಿಟ್ಟ ದೀಪಗಳನ್ನು ಸಾಕ್ಷಿಯಾಗಿಟ್ಟುಕೊಂಡು ಮಾತನಾಡುತ್ತಲೇ ಹೋಗಿದ್ದರು.

ವಿಧೇಯ ಮಗ ಕೇಳುತ್ತಲೇ ಕುಳಿತಿದ್ದರು. ಅಷ್ಟೆಲ್ಲಾ ಕೇಳಿದ ನಂತರವೂ ಅವರು ನುಡಿದದ್ದು ಇಷ್ಟೆ ; "ಬಹಳವೆ ವೇಳೆಯಾಯಿತು. ಅವ್ವ. ಎಷ್ಟೆಲ್ಲ ಮಾತನಾಡಿ ಆಯಾಸಗೊಂಡಿರಿ. ವಿಶ್ರಾಂತಿ ತೆಗೆದುಕೊಳ್ಳಿರಿ. ನಾಳೆ ಹಗಲಿನಲ್ಲಿ ಕುಳಿತು ಬೇಕಾದಷ್ಟು

ಮಾತಾಡೋಣ". ತಾಯಿಯ ಭುಜದ ಮೇಲೆ ಕೈಯಿಟ್ಟು ಮೃದುವಾಗಿ ಅದುಮಿ ಸಾಂತ್ವನ ನೀಡುವಂತೆ ಕಣ್ಣರೆಪ್ಪೆಗಳನ್ನು ಮುಚ್ಚಿ ತೆರೆದು, ಮಹಾರಾಜರು ತಮ್ಮ ಕೋಣೆಯತ್ತ ಪಾದ ಬೆಳೆಸಿದ್ದರು. ಮಹಾರಾಜರ ನಿರ್ಗಮನದ ಸೂಚನೆಯನ್ನು ಊಳಿಗದವರು ಕೂಗಿ ತಿಳಿಸಿದ್ದರು. ನಿಧಾನವಾಗಿ ಎಲ್ಲ ಸದ್ದುಗಳೂ ದೂರದೂರವಾದಂತೆ ರಾಜಮಾತೆಯ ಕೋಣೆಯನ್ನು ನೀರವ ಮೌನ ಆವರಿಸಿಕೊಂಡಿತ್ತು. ಅವರ ಕರುಳು ವ್ಯಥೆಯಿಂದ ಒದ್ದಾಡಿತ್ತು. "ಮಗನಿಗ್ಯಾಕೆ ತಾವು ಹೇಳುವುದು ಅರ್ಥವಾಗುತ್ತಿಲ್ಲ. ಎಷ್ಟೆಲ್ಲ ಜ್ಞಾನವಿದೆ. ಆದರೂ ತನ್ನ ಸುತ್ತಮುತ್ತ ಏನು ನಡೆಯುತ್ತಿದೆ ಎಂಬುದರ ಅರಿವೂ ಸಹ ಯಾಕೆ ಆಗುತ್ತಿಲ್ಲ. ಇಂದು ಅರಮನೆಯ ಊಳಿಗದವರು, ಮಾತು ಮೀರುತ್ತಾರೆ. ನಾಳೆ ನಾಡವರು ಎದುರು ನಿಂತು ಪ್ರಶ್ನಿಸುತ್ತಾರೆ. ಇವೆಲ್ಲ ಒಳಗೇ ನಡೆಯುವ ವಿಚಾರಗಳು. ಹೊರಗಿನ ನಾಡವರಿಗೆ ಈ ಸುದ್ದಿ ತಲುಪಿದರೆ ಅವರು ನಮ್ಮ ನಾಡ ಮೇಲೆ ಆಕ್ರಮಣ ಮಾಡಿ ಜಯಿಸದೆ ಹೋದಾರೆಯೆ ? ಶತ್ರುಗಳಿಗೆ ನಾವೇ ವೀಳೆಯವನ್ನು ಕೊಟ್ಟು, ಜಯವನ್ನು ಹೊರಿಸಿ ಕಳುಹಿಸಿದಂತಾಗುವುದಿಲ್ಲವೇ ?" ಮಬ್ಬುಗತ್ತಲಲ್ಲಿ ಕುಳಿತ ರಾಜಮಾತೆ ಕಣ್ಣು ಕಾಣದ ಕುರುಡನಂತೆ, ತಾಳ ತುದಿಗಳು ಸಿಗದ ಪ್ರಶ್ನೆಗಳಿಗೆ ಉತ್ತರ ಹುಡುಕುತ್ತಾ ತಡಬಡಾಯಿಸಿದ್ದರು.

***

ದೀಪದ ಬೆಳಕಿನಲ್ಲಿ ತಮ್ಮ ಕಣ್ಣ ಮುಂದೆ ಕಾಣುತ್ತಿದ್ದ ತಮ್ಮ ದೈತ್ಯಾಕಾರದ ನೆರಳನ್ನೇ ನೋಡುತ್ತಾ ನೋಡುತ್ತಾ ಚಾಮರಾಜರು ತಮ್ಮ ಕೋಣೆಯತ್ತ ಸಾಗಿ ಬಂದಿದ್ದರು. ತಮ್ಮ ನೆರಳೂ ಸಹ ತಮ್ಮನ್ನೇ ಹೆದರಿಸುವಂತೆ ಕಾಣುತ್ತದೆಯಲ್ಲ ?! ನೆರಳು ಅವಾಸ್ತವ, ಆದರೂ ಅದಕ್ಕೆ ಎಷ್ಟು ಶಕ್ತಿ ! ನೆರಳು ತಮ್ಮದೇ ಆದರೂ, ತಮಗೇ ಅದನ್ನು ಹಿಡಿಯಲಾಗದ ದುರಂತ. ನಿಂತರೆ ನಿಲ್ಲುತ್ತದೆ. ಕುಳಿತರೆ ಕೂರುತ್ತದೆ. ಓಡಿದರೆ ಓಡುತ್ತದೆ. ಹಿಡಿಯ ಹೋದರೆ.... ನಮಗೂ ಅದಕ್ಕೂ ಸಂಬಂಧವೇ ಇಲ್ಲದಂತೆ, ಗಾಳಿಯಲ್ಲಿ ಕೈಯಾಡಿಸಿದಷ್ಟೇ ವ್ಯರ್ಥವಾದ ಕಸರತ್ತು. ಮನುಷ್ಯನ ಬದುಕೂ ನೆರಳಿನಂತೆಯೇ ಅನ್ನಿಸಿಬಿಡುತ್ತದೆ. ಅವರವರ ಬದುಕು ಅವರವರ ಕೈಗೆ ಸಿಗುತ್ತಿದೆಯೆ ? ಖಂಡಿತವಾಗಿ ಇಲ್ಲ. ಯಾರದೋ ಬದುಕು, ಯಾರದೋ ಮರ್ಜಿಯಂತೆ ನಡೆಯಬೇಕು. ಇಷ್ಟ ಇದೆಯೋ ಇಲ್ಲವೋ ಲೆಕ್ಕಕ್ಕಿಲ್ಲ. ಒಬ್ಬ ರಾಜಕುಮಾರನಿಗೇ ಅವನ ಬದುಕನ್ನು ಅವನಿಗೆ ಬೇಕಾದಂತೆ ನಡೆಸಲು ಸಾಧ್ಯವಿಲ್ಲವಾದರೆ ಇನ್ನು ಸಾಮಾನ್ಯ ಜನರ ಕಥೆಯೇನು ?!

ಮಹಾರಾಜರ ಮಗ ಮಹಾರಾಜನೇ ಆಗಬೇಕು, ಮಂತ್ರಿಯ ಮಗ ಮಂತ್ರಿಯೇ ಆಗಬೇಕೆಂದು ಅದಾರು ಶಾಸನವನ್ನು ಮಾಡಿಟ್ಟಿದ್ದಾರೆ. ರಾಜಧರ್ಮ, ಪುತ್ರಧರ್ಮ -

ಹೀಗೆ ಎಲ್ಲರೂ ಧರ್ಮವನ್ನೇ ಮುಂದೆಮಾಡಿ ಮಾತಾಡುತ್ತಾರೆ. ವ್ಯಕ್ತಿಧರ್ಮ ಅನ್ನುವುದೊಂದು ಇದೆ ಎಂಬುದನ್ನು ಮರೆತೇ ಬಿಡುತ್ತಾರಲ್ಲ, ರಾಜನಾಗಲಿ, ಪ್ರಜೆಯಾಗಲಿ ಅವನಿಗೆ ಅವನದೇ ಆದಂಥ ನಿಲುವುಗಳು, ಬಯಕೆಗಳು ಇರುತ್ತವೆ. ಅವರ ಅಂತರಂಗದಲ್ಲಿನ ಪರಮಾತ್ಮ ಏನು ಹೇಳುತ್ತಾನೆ ಅದರಂತೆ ಕೇಳಿಕೊಂಡು ನಡೆಯಲು ಅವರವರಿಗೆ ಸ್ವಾತಂತ್ರ್ಯ ಇರಬೇಕಲ್ಲದೆ ಬಂಧನದ ಹಿಂಸೆಯಿರಬಾರದು. ಆದರೆ ತಮಗಂತೂ ಬುದ್ಧಿ ತಿಳಿದಾಗಿನಿಂದಲೂ ಬಂಧನದ ಹಿಂಸೆಯ ಅನುಭವ ಆಗುತ್ತಿದೆಯೆ ವಿನಾ ಸ್ವಾತಂತ್ರ್ಯದ ಅನುಭವವಲ್ಲ. ಯುವರಾಜಕುಮಾರ, ಮಹಾರಾಜರಾಗುವವರು, ಮಹಾರಾಜರು.... ಹೀಗೆ ಎಲ್ಲವೂ ಯಾರಿಂದಲೋ ಪೂರ್ವನಿರ್ಧಾರಿತವಾಗಿಬಿಟ್ಟ ವಿಚಾರಗಳೇ ಬದುಕಿನುದ್ದಕ್ಕೂ "ಚಾಮರಾಜ ನಿನಗೇನು ಬೇಕೋ ?" ಮಹಾರಾಜರಾಗಿದ್ದ ಬೋಳ ಚಾಮರಾಜರು ಒಮ್ಮೆಯೂ ತಂದೆಯಂತೆ ವಿಚಾರಿಸಲೇ ಇಲ್ಲ. "ಮುಂದೆ ಯುವರಾಜನಾಗುವವನು ; ಕ್ಷತ್ರಿಯರಿಗೆ ಅರ್ಹವಾದ, ಅಗತ್ಯವಾದ ಯುದ್ಧ ವಿದ್ಯೆಗಳನ್ನು ಹೇಳಿಕೊಡಿರಿ. ಮಹಾರಾಜನಾಗುವವನು ; ರಾಜಕೌಶಲಗಳನ್ನು, ಶತ್ರುಗಳನ್ನು ಬಗ್ಗುಬಡಿಯುವ ರಾಜಕಾರಣದ ಪಟ್ಟುಗಳನ್ನು ಕಲಿಸಿಕೊಡಿರಿ. ಪ್ರಜೆಗಳನ್ನು ಪಾಲಿಸುವ ದೊರೆಯಾಗುವವನು ; ಆಡಳಿತದ ಸೂಕ್ಷ್ಮಗಳನ್ನು ಅರ್ಥ ಮಾಡಿಸಿರಿ." ತಮ್ಮ ಬದುಕಿನ ನಡೆಗಳನ್ನು ಪಗಡೆಯಾಟದ ಕಾಯಿಗಳಂತೆ ಮಹಾರಾಜರೇ ನಡೆಸಲಾರಂಭಿಸಿದಾಗ ಅವರಲ್ಲಿ ತಮ್ಮ "ತಂದೆ" ಕಂಡು ಬರುತ್ತಲೇ ಇರಲಿಲ್ಲ. "ಮಹಾರಾಜರು" ಮಾತ್ರ ವಿಜೃಂಭಿಸುತ್ತಿದ್ದರು. ನಾಡು, ಪ್ರಜೆಗಳು, ಅದನ್ನು, ಅವರನ್ನು ಜವಾಬ್ದಾರಿಯಿಂದ ಕಾಯುವ ಕಾರ್ಯ ತಮ್ಮದು. ಆ ಕಾರ್ಯವನ್ನು ಚಾಮುಂಡೇಶ್ವರಿಯ ದಯೆಯಿಂದ ತಾವು ಯಾವುದೇ ಬಾಧಕಗಳಿಲ್ಲದೆ ನಡೆಸಿಕೊಂಡು ಹೋಗುತ್ತಿದ್ದೇವೆ. ಮುಂದೆಯೂ ಆ ಜವಾಬ್ದಾರಿಯನ್ನು ಯಾವುದೇ ಕೊಂಕಿಗೂ ಅವಕಾಶವಿಲ್ಲವಂತೆ ತಮ್ಮ ವಂಶದಲ್ಲಿ ಜನಿಸಿದ ಜ್ಯೇಷ್ಠಪುತ್ರನ ಹೆಗಲಿಗೆ ವರ್ಗಾಯಿಸುತ್ತೇವೆ. ಆತನು ರಾಜಧರ್ಮಕ್ಕೆ ಕೂದಲಷ್ಟೂ ಕೊಂಕಿಲ್ಲದಂತೆ ನಾಡನ್ನು ಪರಿಪಾಲಿಸಬೇಕು. ಆ ರಾಜಧರ್ಮಕ್ಕೆ, ರಾಜತ್ವಕ್ಕೆ ಏನೇನು ಬೇಕಿದೆಯೋ ಅವೆಲ್ಲವನ್ನೂ ಪಡೆದುಕೊಳ್ಳಬೇಕು. ಅದಕ್ಕೆ ಏನು ಬೇಕೋ ಅದೆಲ್ಲವನ್ನೂ ಅವನು ವ್ಯವಸ್ಥೆ ಮಾಡಿಬಿಡಬೇಕು. ತಂದೆ ಮಗನ ನಡುವೆ ನಡೆಯುತ್ತಿದ್ದ ಎಲ್ಲವೂ ಈ ವಿಷಯಗಳಷ್ಟರೊಳಗೇ ಗಿರಕಿ ಹೊಡೆಯುತ್ತಿದ್ದವು.

ತಾಯಿಯ ಬಳಿ ಹೋದರೆ ಅಲ್ಲಿಯೂ ಇದೇ ಕಥೆ. ಆದರಿಲ್ಲಿ ದರ್ಪವಿರುತ್ತಿರಲಿಲ್ಲ. ಮುಗ್ಧತೆ ಇರುತ್ತಿತ್ತು. ಅವ್ವ ಯಾವಾಗಲೂ ಪತಿಯಾದ, ಮಹಾರಾಜರ ಆದರ್ಶವನ್ನೇ ತಮ್ಮ ಮುಂದೆ ಹರಹಿ ಇಡುತ್ತಿದ್ದರು. ಅವ್ವನಿಗೆ

ಮಹಾರಾಜರ ವ್ಯಕ್ತಿತ್ವದಲ್ಲಿ ಬಹಳವೇ ದೊಡ್ಡ ಗುಣವಾಗಿ ಕಾಣುತ್ತಿದ್ದದ್ದು ಅವರ ಅನನ್ಯವಾದ ಭಕ್ತಿ. ಅವ್ವ, ಮಹಾರಾಜರನ್ನು ಕುರಿತಂತೆ ತಮಗೆ ಹೇಳುತ್ತಿದ್ದ ಮಾತುಗಳಲ್ಲಿ ಒಂದು ವಿಷಯ ಪದೇಪದೇ ಪುನರಾವರ್ತನೆಗೊಳ್ಳುತ್ತಿತ್ತು. ಅದನ್ನು ಅವ್ವೆಯ ಮಾತುಗಳಲ್ಲಿಯೇ ಮೆಲುಕು ಹಾಕಬೇಕು.

"ಮಹಾರಾಜರು ಬಹಳವೇ ದೈವಭಕ್ತರು ಚಾಮರಾಜ, ನಿನ್ನ ತಂದೆಯವರಿಗೆ ಬೆಟ್ಟದ ಚಾಮುಂಡೇಶ್ವರೀದೇವಿಯೆಂದರೆ ಮತ್ತೊಂದು ಕೈ ಹೆಚ್ಚು ಭಕ್ತಿ. ಅದಕ್ಕೆ ಕಾರಣವೂ ಇದೆ.ಒಮ್ಮೆ ಅವರು ದೇವಿಯ ದರ್ಶನಾರ್ಥವಾಗಿ ಮಿತ ಪರಿವಾರದೊಡನೆ ಬೆಟ್ಟಕ್ಕೆ ಹೋಗಿದ್ದರು. ಮಳೆಯ ಕಾಲ, ಹಾದಿಯಲ್ಲಿ ಮಳೆ ಹೊಯ್ದು ತೊಂದರೆಯಾದೀತೆಂದು. ರಾಣಿಪರಿವಾರವನ್ನು ಕರೆದೊಯ್ದಿರಲಿಲ್ಲ. ಅರಮನೆಯ ದೇವರ ಮನೆಯಲ್ಲಿಯೇ ನಾವು ರಾಣಿಯರೆಲ್ಲ ದೇವಿಯ ಸೇವೆಯನ್ನು ಭಕ್ತಿಯಿಂದಲೇ ಕೈಗೊಂಡಿದ್ದೆವು. ಆ ಅರ್ಚನೆ,ಸೇವೆಗಳ ಫಲ ನಮಗಂದೇ ದೊರೆತೀತೆಂದು ನಮಗಾರ ಅರಿವಿಗೂ ಇರಲಿಲ್ಲ. ನಾವು ಪಡೆದುಕೊಂಡ ಫಲ ಎಷ್ಟು ಅಮೂಲ್ಯವಾದದ್ದೆಂದು ಗೊತ್ತಾದದ್ದು, ಮಹಾರಾಜರು ಮತ್ತು ಅವರೊಂದಿಗೆ ಹೋದವರು ಹಿಂತಿರುಗಿ ಅರಮನೆಗೆ ಬಂದ ಮೇಲೆಯೇ."

ಅವ್ವೆಯ ನುಡಿಗಳು, ಕೇಳುತ್ತಿದ್ದ ತಮ್ಮಲ್ಲಿ ಬಹಳವೇ ಕುತೂಹಲ ಮೂಡಿಸುತ್ತಿತ್ತು. "ದೇವಿಯನ್ನು ಪೂಜಿಸಿ ಅಂಥ ಅಮೂಲ್ಯವಾದ ಫಲವನ್ನೇನು ಪಡೆದಿರಿ ಅವ್ವೆ, ಬೇಗ ಹೇಳಿರಿ" ತಾವು ಆತುರಪಡಿಸುತ್ತಿದ್ದೆವು. "ಅಂದು ನಮ್ಮ ಮಾಂಗಲ್ಯವೇ ಕಳೆದುಹೋಗುವ ದುರಂತವೊಂದು ತಲೆತನಕ ಬಂದು ಕೂದಲೆಳೆಯ ಅಂತರದಲ್ಲಿ ನಿಂತುಹೋಗಿತ್ತು". ಮುಂದಕ್ಕೆ ಅವ್ವೆಯಿಂದ ಮಾತುಗಳನ್ನು ಮುಂದುವರಿಸಲಾಗುತ್ತಿರಲಿಲ್ಲ. "ಸಮಾಧಾನಗೊಳ್ಳಿರಿ ತಾಯಿ". ಅವ್ವೆಯ ಆಪ್ತ ಊಳಿಗವಾಗಿದ್ದ ಸಾಕವ್ವ ಕಥನವನ್ನು ತನ್ನ ಕೈಗೆ ತೆಗೆದುಕೊಂಡು ಮುಂದುವರಿಸುತ್ತಿದ್ದಳು.

ಮಹಾರಾಜರು ದೇವಿಯ ಸನ್ನಿಧಿಯನ್ನು ಸೇರಿ, ಸಾಂಗವಾಗಿ ಅರ್ಚನೆ ಮಾಡಿ, ಸಂತೋಷದಿಂದ ಹೊರಬಂದು ಪ್ರಕೃತಿ ಸೌಂದರ್ಯವನ್ನು ನೋಡುತ್ತಾ ಬಂಡೆಯೊಂದರ ಮೇಲೆ ಕುಳಿತರಂತೆ. ಹೋಗಿದ್ದ ಮಿತ ಪರಿವಾರ ಮಹಾರಾಜರಿಂದ ಸಾಕಷ್ಟು ದೂರದಲ್ಲಿ ಕುಳಿತು, ಮಹಾರಾಜರ ಅಪ್ಪಣೆಗಾಗಿ ಕಾಯುತ್ತಿತ್ತಂತೆ. ಬೆಟ್ಟದ ಮೇಲೆ ಮೋಡಗಳು ಕವಿಯ ತೊಡಗಿದ್ದವು. ಮಹಾಸ್ವಾಮಿಗಳನ್ನು ಎಚ್ಚರಿಸಲು ಪರಿವಾರದವರಿಗೆ ಹೆದರಿಕೆ. ಅದು ಅಸಾಧ್ಯವೂ ಹೌದು. ದಿನನಿತ್ಯವೂ ಆಡಳಿತದ ಜಂಜಾಟದಲ್ಲಿ ಮುಳುಗಿರುವ ಮಹಾರಾಜರು ಪ್ರಕೃತಿಯೆದುರು ಧ್ಯಾನಸ್ಥ ಸ್ಥಿತಿಯಲ್ಲಿ ಕುಳಿತಿರುವಾಗ ಯಾರಾದರೂ

ಎಚ್ಚರಿಸಲು ಸಾಧ್ಯವೇ ! ಆದರೂ ಮಳೆಯ ಭಯ, ಮಹಾರಾಜರು ತೊಯ್ದಾರೆಂಬ ಆತಂಕದಿಂದ ಹಿರಿಯ ಊಳಿಗದವರು ಅವರ ಬಳಿ ಅಪ್ಪಣೆ ಪಡೆಯಲು ಹೆಜ್ಜೆ ಇಡುತ್ತಿದ್ದಂತೆಯೇ ಕವಿದುಕೊಂಡ ಮೋಡಗಳ ನಡುವೆ ಬೆಳ್ಳಿಯ ರೇಖೆಗಳು ಮೂಡಿ ಗುಡುಗಿನ ಸದ್ದು ಕಿವಿಯ ತಮಟೆಯನ್ನು ಹರಿದು ಹಾಕುವಂತೆ ಇಡೀ ಬೆಟ್ಟವನ್ನು ಆಕ್ರಮಿಸಿಕೊಂಡು ಬಿಟ್ಟಿತ್ತು. ಎಲ್ಲರ ಕಣ್ಣುಗಳೂ ಕ್ಷಣಕಾಲ ಮುಚ್ಚಿಕೊಂಡಿದ್ದವು. ಕೈಗಳೆರಡೂ ಕಿವಿಗಳನ್ನು ಅದುಮಿ ಹಿಡಿದುಕೊಂಡಿದ್ದವು. ಮರುಕ್ಷಣಧಲ್ಲಿ ಜೋರ್‍ರೆಂದು ಮಳೆ ಸುರಿಯತೊಡಗಿತ್ತು. ಮಹಾರಾಜರ ಅಪ್ಪಣೆಯನ್ನೀಗ ಊಳಿಗದವರು ಕಾಯಬೇಕಿರಲಿಲ್ಲ. ಎಲ್ಲರೂ ದಾಂಗುಡಿಯಿಟ್ಟು ಮಹಾರಾಜರತ್ತ ಓಡಿಬಂದಿದ್ದರು. ಓಡಿ ಬಂದವರಿಗೆ ಅಲ್ಲಿ ಕಂಡದ್ದೇನು ?

ಕಣ್ಣು ಮುಚ್ಚಿ ಕಣ್ಣು ಬಿಡುವಷ್ಟು ಕಾಲದಲ್ಲಿ ಮಳೆಯಿಂದಾಗಿ ತೊಯ್ದು ಹೋಗಿದ್ದ ಮಹಾರಾಜರು. ಮಹಾರಾಜರು ತೊಯ್ದು ಹೋದ ಬಗೆಗೆ ಆತಂಕಪಟ್ಟುಕೊಳ್ಳುತ್ತಾ ಬಂದ ಆಪ್ತ ಊಳಿಗದವರಲ್ಲಿ ಓರ್ವ, ಮಹಾರಾಜರು ಮತ್ತಷ್ಟು ನೆನೆಯದಂತೆ ಕೊಡೆಯನ್ನು ಹಿಡಿದಿದ್ದ. ಮತ್ತೋರ್ವ ಶುಭ್ರ ವಸ್ತ್ರವೊಂದರಿಂದ ತೊಯ್ದು ಹೋದ ಮಹಾರಾಜರ ತಲೆಯನ್ನು ಒರೆಸಲು ಮುಂದಾಗಿದ್ದ. ಅವನಿಗೆ ಇದ್ದಕ್ಕಿದ್ದಂತೆಯೇ ನಡುಕ ಉಂಟಾಗಿ ಬಿಟ್ಟಿತ್ತು. ಅವನ ವಸ್ತ್ರಕ್ಕೆ ಮಹಾರಾಜರ ಕೂದಲು ಸಿಗುತ್ತಿಲ್ಲ, ಹಿಂದಿನ ಕ್ಷಣದ ತನಕ ಮಂಡೆ ತುಂಬಾ ಇದ್ದ ಕೂದಲು ಈಗ ಮಾಯವಾಗಿಬಿಟ್ಟಿದೆ. ಬೋಳು ಮಂಡೆ ಮಾತ್ರ ಇದೆ. ವಸ್ತ್ರ ತಾಗಿದ ಕಾರಣಕ್ಕೋ ಏನೋ ಮಹಾರಾಜರು 'ಹ್ಹಾಂ' ಎಂದು ನೋವಿನ ಧ್ವನಿ ಹೊರಡಿಸಿದ್ದರು.

ಊಳಿಗದವರೆಲ್ಲರೂ ಗಡಗಡ ನಡುಗಲಾರಂಭಿಸಿದ್ದರು. ಪರಿವಾರದ ಮುಖ್ಯಸ್ಥ ಸಂಭಾಳಿಸಿಕೊಂಡು "ಮಹಾಸ್ವಾಮಿ ಇದೇನಾಗಿ ಹೋಗಿದೆ. ಅಪ್ಪಣೆ ಮಾಡಿ" ನಡುಬಗ್ಗಿಸಿ ನಡುಗುತ್ತಲೇ ಕೇಳಿದ್ದನು.

ಮಹಾರಾಜರ ಧ್ವನಿಯೂ ಅವರಿಗೇ ಅರಿವಿಲ್ಲದಂತೆ ಕಂಪನಕ್ಕೆ ಒಳಗಾಗಿತ್ತು. ಅವರಿಗೂ ಏನೆಂದು ಗೊತ್ತಾಗಲಿಲ್ಲವಂತೆ. ಮಿಂಚು, ಸಿಡಿಲುಗಳಿಗೆ ಅವರು ಬೆಚ್ಚಿಬಿದ್ದು ಸಾವರಿಸಿಕೊಳ್ಳುವಷ್ಟರಲ್ಲಿ ಪುರ್‍ರೆಂಬ ಸದ್ದು ತಲೆಯ ಮೇಲೆ ಉಂಟಾಗಿ ಅದು ಏನೆಂದು ತಲೆಯಲ್ಲಿ ಕೈಯಾಡಿಸಲು ಹೋಗುವಷ್ಟರಲ್ಲಿ ಮಳೆಹನಿಗಳು ಟಪ್‌ಟಪ್ಪೆಂದು ಬೀಳತೊಡಗಿದವಂತೆ.

ಊಳಿಗದವರು ಮಹಾರಾಜರನ್ನು ದೇವಿಯ ಗುಡಿಯತ್ತ ಸರಸರನೆ ಸಾಗಿಸಿಕೊಂಡು ಬಂದಿದ್ದರು. ಆವರಣದಲ್ಲಿಯೂ ಮಳೆ ಮೋಡಗಳಿಂದ ಕತ್ತಲಾಗಿತ್ತು.